**ಎಲ್ ಎ ಸಿ 8/2023** ಪ್ರಾ.ಸಾ: **1**

ದಿ: **30.1.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಡಿಜಿಪಿ ರವರಿಂದ:

ಸರಕಾರದವರು ನನ್ನ 4 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ನನ್ನ ಜಮೀನು ಸಿರುಗುಪ್ಪ ಮತ್ತು ಹಳೇಕೋಟೆ ಮಧ್ಯದಲ್ಲಿ ಬರುತ್ತದೆ. ನನ್ನ ಹೊಲದಿಂದ ಸಿರುಗುಪ್ಪ ಸುಮಾರು ಎರಡೂವರೆ ಕಿ. ಮೀ. ದೂರ ಆಗುತ್ತದೆ. ಹಳೇಕೋಟೆ ನಮ್ಮ ಜಮೀನಿನಿಂದ ಎರಡೂವರೆ ಕಿ. ಮೀ. ದೂರ ಆಗುತ್ತದೆ. ನಮ್ಮ ಜಮೀನು ಹಳೇಕೋಟೆ ಗ್ರಾಮದಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಹಣಿಯಲ್ಲಿ ಹಳೇಕೋಟೆ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ಹಳೇಕೋಟೆಯಿಂದ ಸಿರುಗುಪ್ಪ ಸುಮಾರು 10 ರಿಂದ 12 ಕಿ. ಮೀ. ದೂರ ಆಗುತ್ತದೆ ಎಂದರೆ ಸರಿಯಲ್ಲ. ಸ್ವಾಧೀನ ಪಡಿಸಿಕೊಂಡ ಜಮೀನು ಬಯಲು ಭೂಮಿ ಎಂದರೆ ಸರಿಯಲ್ಲ. ಅದು ತೋಟ ಆಗಿದೆ. ಸದರಿ ಜಮೀನು ತೋಟ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಜಮೀನಿನಲ್ಲಿ ನನ್ನ ಗಂಡ ಬೋರ್ ಹಾಕಿಸಿ ಹಣ್ಣಿನ ಬೆಳೆಗಳನ್ನು ಬೆಳೆಯತ್ತಿದ್ದರು. ಜಮೀನಿನಲ್ಲಿ ರೂಮು ಕಟ್ಟಿಸಿದ್ದ ಬಗ್ಗೆ, ಬೋರ್ ಹಾಕಿಸಿದ್ದ ಬಗ್ಗೆ ಮತ್ತು ಹಣ್ಣಿನ ಬೆಳೆಗಳನ್ನು ಬೆಳೆಯತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಗಂಡ 4 ವರ್ಷದ ಹಿಂದೆ ಮರಣ ಹೊಂದಿದ್ದರು. ನನ್ನ ಗಂಡನಿಗೆ ಸರಕಾರದವರು ಎಕರೆಗೆ ರೂ. 40 ಸಾವಿರದಂತೆ ಪರಿಹಾರದ ಹಣ ಕೊಟ್ಟಿರುತ್ತಾರೆ. ಸುಮಾರು 8 ವರ್ಷದ ಹಿಂದೆ ಸದರಿ ಹಣ ಕೊಟ್ಟಿದ್ದರು. ನನ್ನ ಗಂಡ ಸದರಿ ಪರಿಹಾರಕ್ಕೆ ಒಪ್ಪಿಗೆ ಸೂಚಿಸಿ ಸಹಿ ಮಾಡಿ ಹಣ ಪಡೆದಿದ್ದ ಎಂದರೆ ಸರಿಯಲ್ಲ. ಸರಕಾರದವರು ನೀಡಿರುವ ರೂ. 40 ಸಾವಿರ ಪರಿಹಾರದ ಹಣ ಸೂಕ್ತವಾಗಿದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಸುತ್ತ ಮುತ್ತಲು ಆಸ್ಪತ್ರೆ, ಸರಕಾರಿ ಕಚೇರಿ, ಶಾಲೆ, ಕಾಲೇಜುಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಕಾಲೇಜು ಮತ್ತು ಕಲ್ಯಾಣ ಮಂಟಪ ಇದೆ ಎಂದು ಹೇಳಿರುತ್ತಾರೆ. ನಮ್ಮ ಜಮೀನಿನಿಂದ ಸುಮಾರು 50 ಅಡಿ ದೂರದಲ್ಲಿ ಕಾಲೇಜು ಮತ್ತು ಕಲ್ಯಾಣ ಮಂಟಪ ಇದೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ಯಾವುದೇ ಎನ್ ಎ ಪ್ಲಾಟುಗಳು ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಸುತ್ತ ಇರುವ ಎನ್ ಎ ಪ್ಲಾಟುಗಳು 15 ರಿಂದ 20 ಲಕ್ಷ ಬೆಲೆ ಬಾಳುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು

ಯಾವುದೇ ದಾಖಲೆಗಳು ಹಾಜರುಪಡಿಸಿಲ್ಲ. ಸರಕಾರದವರು ಎಲ್ಲಾ ಅಂಶಗಳನ್ನು ಪರಿಶೀಲಿಸಿ ಎಕರೆಗೆ ರೂ. 40 ಸಾವಿರ ಪರಿಹಾರದ ಹಣ ನೀಡಿರುವುದು ಸೂಕ್ತವಾಗಿದೆ ಮತ್ತು ಸಮಂಜಸವಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಅದಕ್ಕೆ ಒಪ್ಪಿ ಹೆಚ್ಚಿಗೆ ಪರಿಹಾರ ಕೇಳುವುದಿಲ್ಲ ಎಂದು ಹೇಳಿ ಸಹಿ ಮಾಡಿ ಒಪ್ಪಿಗೆ ಪತ್ರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿ ಇದೆ,

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ವಿಶೇಷ ನ್ಯಾಯಾಲಯ, ಬಳ್ಳಾರಿ.